155ನೇ ಅ-330 = (64) 4pm

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರುಗಳಾದ ಶ್ರೀ ಸಿ.ಟಿ. ರವಿ, ಶ್ರೀ ಎಸ್.ವಿ. ಸಂಕನೂರ ಹಾಗೂ ಇತರರು ನಿಯಮ 330 ರಡಿ ನೀಡಿರುವ ಸೂಚನೆಗೆ ಸರ್ಕಾರದ ಉತ್ತರ.

**ಸೂಚನೆ:** ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಗೊಳಿಸಲು ಸರಕಾರ ರಾಜ್ಯ, ಜಿಲ್ಲಾ ಹಾಗೂ ತಾಲ್ಲೂಕ ಮಟ್ಟದ ಸಮಿತಿಗಳನ್ನು ರಚಿಸಿ ಅವರಿಗೆ ಗೌರವಧನ ನೀಡುವ ಮೂಲಕ ರಾಜ್ಯ ಸರಕಾರದ ಬೊಕ್ಕಸಕ್ಕೆ ಹಾನಿ ಉಂಟಾಗುತ್ತಿರುವುದು. ಇದಕ್ಕೆ ಸಂಬಂಧಿಸಿದಂತೆ ಸರಕಾರದ ಎಲ್ಲ ಯೋಜನೆಗಳನ್ನು ಅನುಷ್ಠಾನಗೊಳಿಸಲು ವಿವಿಧ ಹಂತಗಳಲ್ಲಿ ಅಧಿಕಾರಿಗಳು ಇರುವಾಗ ಪುನಃ ಚುನಾಯಿತರಲ್ಲದ ಸಮಿತಿ ಸದಸ್ಯರನ್ನು ರಚಿಸುವ ಅವಶ್ಯಕತೆ ಇಲ್ಲದಿರುವ ಬಗ್ಗೆ ಪ್ರಸ್ತಾಪಿಸುವುದು ಹಾಗೂ ಚರ್ಚಿಸುವುದು. ಅವಕಾಶ ನೀಡಲು ತಮ್ಮಲ್ಲಿ ಪ್ರಾರ್ಥನೆ.

**ಉತ್ತರ:**

2023ನೇ ಸಾಲಿನ ಜುಲೈ ಮಾಹೆಯಲ್ಲಿ ಮಂಡಿಸಿದ 2023-24ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯದ ಜನತೆಗೆ ಪಂಚ ಗ್ಯಾರಂಟಿ ಯೋಜನೆಗಳಾದ "ಶಕ್ತಿ", "ಗೃಹಜ್ಯೋತಿ", "ಅನ್ನಭಾಗ್ಯ", "ಗೃಹ ಲಕ್ಷ್ಮಿ", ಮತ್ತು "ಯುವನಿಧಿ" ಯೋಜನೆಗಳನ್ನು ಜಾರಿಗೊಳಿಸುವುದಾಗಿ ಘೋಷಿಸಲಾಗಿರುತ್ತದೆ. ಅದರಂತೆ, "ಶಕ್ತಿ" ಯೋಜನೆಯನ್ನು ಜೂನ್ 11, 2023 ರಂದು, "ಗೃಹಜ್ಯೋತಿ" ಯೋಜನೆಯನ್ನು ಜುಲೈ 1, 2023 ರಂದು, "ಅನ್ನಭಾಗ್ಯ" ಯೋಜನೆಯನ್ನು ಜುಲೈ 2023 ರಂದು, "ಗೃಹಲಕ್ಷ್ಮಿ" ಯೋಜನೆಯನ್ನು 2023 ರಂದು ಮತ್ತು "ಯುವನಿಧಿ" ಯೋಜನೆಯನ್ನು ಜನವರಿ 12, 2024 ರಂದು ಜಾರಿಗೊಳಿಸಿ, ಅರ್ಹ ಫಲಾನುಭವಿಗಳಿಗೆ ಯೋಜನೆಯ ಲಾಭಗಳನ್ನು ವಿತರಿಸಲಾಗುತ್ತಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ (ಆಸು) 18 ಸ್ವೀಮರ 2024, ದಿನಾಂಕ: 25-01-2024 ರಲ್ಲಿ ಗ್ಯಾರಂಟಿ ಯೋಜನೆಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ 'ರಾಜ್ಯ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ, ತಾಲ್ಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಹಾಗೂ ಬಿಬಿಎಂಪಿ ಮಟ್ಟದಲ್ಲಿ ಬಿ.ಬಿ.ಎಂ.ಪಿ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಗಳನ್ನು ರಚಿಸಲು ಹಾಗೂ ಸದರಿ ಪ್ರಾಧಿಕಾರ ಮತ್ತು ಸಮಿತಿಗಳ ಕರ್ತವ್ಯ ಮತ್ತು ಜವಾಬ್ದಾರಿ ನಿರ್ವಹಣೆ ಬಗ್ಗೆ ನಿರ್ದೇಶನಗಳನ್ನು ನೀಡಲಾಗಿರುತ್ತದೆ.

ರಾಜ್ಯದ ಜನರ ಆರ್ಥಿಕ ಸಾಮರ್ಥ್ಯವನ್ನು ಬೆಂಬಲಿಸಲು, ಸಾಮಾನ್ಯ ಜನರಿಗೆ ಆಹಾರ ಭದ್ರತೆಯನ್ನು ಒದಗಿಸಲು, ಆತ್ಮ ವಿಶ್ವಾಸವನ್ನು ಹೆಚ್ಚಿಸಲು ಮತ್ತು ರಾಜ್ಯದ ಜನರ ಜೀವನ ಮಟ್ಟವನ್ನು ಸುಧಾರಿಸಲು ಪಂಚ ಗ್ಯಾರಂಟಿ ಯೋಜನೆಗಳು ಕೊನೆಯ ಫಲಾನುಭವಿಯನ್ನೂ ಸಹ ತಲಪುವುದನ್ನು ಖಚಿತ ಪಡಿಸಿಕೊಳ್ಳಲು ಸರ್ಕಾರವು ಸಮಿತಿಗಳನ್ನು ಸ್ಥಾಪಿಸಿದೆ. ಇದರಿಂದಾಗಿ ಈ ಐದು ಖಾತರಿ ಯೋಜನೆಗಳ ಉದ್ದೇಶಗಳನ್ನು ಪರಿಣಾಮಕಾರಿಯಾಗಿ ಕಾರ್ಯಗತಗೊಳಿಸಲಾಗುತ್ತದೆ ಮತ್ತು ಮೇಲ್ವಿಚಾರಣೆ ಮಾಡಲಾಗುತ್ತದೆ.

**ಸಂಖ್ಯೆ: ಸಿಆಸುಇ (ಆಸು) 55 ತಎಇ 2025**

(ಸಿದ್ದರಾಮಯ್ಯ)

**ಮುಖ್ಯಮಂತ್ರಿ**